■ ಶಶಿಕುಮಾರ್ ಸಿ.

# ಇನ್ನು ಕಾಲ್ ಫಾರ್ವರ್ಡಿಂಗ್ ಸ್ಥಗಿತ

ಯುಎಸ್‌ಎಸ್‌ಡಿ (ಅನ್‌ಸ್ಟ್ರಕ್ಚರ್ಡ್ ಸಪ್ಲಿಮೆಂಟರಿ ಸರ್ವೀಸ್ ಡೇಟಾ) ಆಧರಿತ ಕಾಲ್ ಫಾರ್ವರ್ಡಿಂಗ್ ಸೇವೆಯನ್ನು ದುರ್ಬಳಕೆ ಮಾಡಿಕೊಂಡು ವಂಚನೆ ಎಸಗಲಾಗುತ್ತಿತ್ತು. ಇದಕ್ಕೆ ಕಡಿವಾಣ ಹಾಕುವ ಸಲುವಾಗಿ ದೂರಸಂಪರ್ಕ ಇಲಾಖೆಯು ಈಚೆಗೆ ಯುಎಸ್‌ಎಸ್‌ಡಿ ಕಾಲ್ ಫಾರ್ವರ್ಡಿಂಗ್ ಸೇವೆಯನ್ನು ಸ್ಥಗಿತಗೊಳಿಸಲು ಸೂಚಿಸಿದೆ. ಅದರಂತೆ ದೇಶದ ಎಲ್ಲ ಟೆಲಿಕಾಂ ಸಂಸ್ಥೆಗಳು ಈ ಸೇವೆಯನ್ನು ಸ್ಥಗಿತಗೊಳಿಸಿವೆ.

ಏಪ್ರಿಲ್ 15ರೊಳಗೆ ಈ ಸೇವೆಯನ್ನು ನಿಷ್ಕ್ರಿಯಗೊಳಿಸುವಂತೆ ಇಲಾಖೆಯು ಟೆಲಿಕಾಂ ಕಂಪನಿಗಳಿಗೆ ಸೂಚಿಸಿತ್ತು. ಒಟಿಪಿಯಂತಹ ಗೌಪ್ಯ ಮಾಹಿತಿ ಕದಿಯಲು ವಂಚಕರು ಕಾಲ್ ಫಾರ್ವರ್ಡಿಂಗ್ ಸೇವೆಯನ್ನು ಅಸ್ತ್ರವಾಗಿ ಬಳಸುತ್ತಿದ್ದರು. ಉದ್ದೇಶಿತವಾಗಿ ಗ್ರಾಹಕರ ಮೊಬೈಲ್ ಸಂಖ್ಯೆಗಳನ್ನು ಬ್ಲಾಕ್ ಮಾಡಿ ಅಥವಾ ಹ್ಯಾಕ್ ಮಾಡಿ ಆ ಸಂಖ್ಯೆಗಳಿಗೆ ಬರುತ್ತಿದ್ದ ಕರೆಗಳನ್ನು ಅಥವಾ ಮೆಸೇಜ್‌ಗಳನ್ನು ಸೈಬರ್ ಖದೀಮರು ತಮ್ಮ ಮೊಬೈಲ್ ನಂಬರ್‌ಗಳಿಗೆ ಬರುವಂತೆ ಮಾಡಿಕೊಂಡು ಕೃತ್ಯ ಎಸಗುತ್ತಿದ್ದರು.



ಈ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ವ್ಯಕ್ತವಾಗಿದ್ದವು. ಇದರ ಆಧಾರದ ಮೇರೆಗೆ ಇಲಾಖೆಯು ಈ ಕ್ರಮ ಕೈಗೊಂಡಿದೆ.

ಪರ್ಯಾಯ ವಿಧಾನಗಳನ್ನು ಬಳಸಿಕೊಂಡು ಕಾಲ್ ಫಾರ್ವರ್ಡಿಂಗ್ ಸೇವೆಯನ್ನು ಭವಿಷ್ಯದಲ್ಲಿ ಮತ್ತೆ ಸಕ್ರಿಯಗೊಳಿಸಲು ಡಿಒಟಿಯು ಟೆಲಿಕಾಂ ಸಂಸ್ಥೆಗಳಿಗೆ ಸಲಹೆ ನೀಡಿದೆ. ಯುಎಸ್‌ಎಸ್‌ಡಿ ಸೇವೆಗಳನ್ನು ಮೊಬೈಲ್ ಕೀಪ್ಯಾಡ್‌ನಲ್ಲಿ ಕೋಡ್‌ಗಳನ್ನು ಡಯಲ್ ಮಾಡುವ ಮೂಲಕ ಆ್ಯಕ್ಟಿವೇಟ್ ಮತ್ತು ಡಿಆ್ಯಕ್ಟಿವೇಟ್ ಮಾಡುವ ಅವಕಾಶ ಕಲ್ಪಿಸುವ ಬಗ್ಗೆ ಕಂಪನಿಗಳು ಚಿಂತಿಸಿವೆ.

‘ಎಲ್ಲಾ ಸೇವಾದಾರರು 15.04.2024ರಿಂದ ಮುಂದಿನ ಸೂಚನೆ ಬರುವವರೆಗೆ ಅಸ್ತಿತ್ವದಲ್ಲಿರುವ ಯುಎಸ್‌ಎಸ್‌ಡಿ ಆಧರಿತ ಕಾಲ್ ಫಾರ್ವರ್ಡಿಂಗ್ ಸೇವೆಗಳನ್ನು ನಿಲ್ಲಿಸಲು ಸಕ್ಷಮ ಪ್ರಾಧಿಕಾರದಿಂದ ನಿರ್ಧರಿಸಲಾಗಿದೆ’ ಎಂದು ದೂರಸಂಪರ್ಕ ಇಲಾಖೆಯು ಟೆಲಿಕಾಂ ಸಂಸ್ಥೆಗಳಿಗೆ ನೀಡಿರುವ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ. ಪ್ರಿಪೇಯ್ಡ್ ಬ್ಯಾಲೆನ್ಸ್ ಪರಿಶೀಲನೆ ಅಥವಾ ಐಎಂಇಐ ಸಂಖ್ಯೆಯನ್ನು ಪರಿಶೀಲಿಸಲು ಇದನ್ನು ಹೆಚ್ಚಾಗಿ ಬಳಸಲಾಗುತ್ತದೆ. ಯಾವುದೇ ಸಮಸ್ಯೆ ಇಲ್ಲದೆ ಕಾಲ್ ಫಾರ್ವರ್ಡಿಂಗ್ ಸೇವೆಗಳನ್ನು ಸಕ್ರಿಯಗೊಳಿಸಲು ಈ ಸೇವೆಯನ್ನು ಬಳಸಲಾಗುತ್ತಿತ್ತು. ಈಗ ಇದನ್ನೂ ದುರ್ಬಳಕೆಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಇಲಾಖೆಯು ಹೇಳಿದೆ. ■

# ಐಫೋನ್ ಬಳಕೆದಾರರಿಗೆ ಎಚ್ಚರಿಕೆ

ಆ್ಯಪಲ್ ಐಫೋನ್, ಮ್ಯಾಕ್‌ಬುಕ್ಸ್, ಐಪ್ಯಾಡ್ ಹಾಗೂ ವಿಷನ್ ಪ್ರೊ ಹೆಡ್‌ಸೆಟ್‌ಗಳನ್ನು ಬಳಸುವವರಿಗೆ ಕೇಂದ್ರ ಸರ್ಕಾರವು ಈಚೆಗೆ ಎಚ್ಚರಿಕೆ ನೀಡಿದೆ. ಇದು ಆ್ಯಪಲ್ ಉತ್ಪನ್ನಗಳ ಬಳಕೆದಾರರಲ್ಲಿ ಕೊಂಚ ಆತಂಕ ಹುಟ್ಟುಹಾಕಿದೆ.



‘ಆ್ಯಪಲ್ ಕಂಪನಿಯ ಕೆಲವು ಡಿವೈಸ್‌ಗಳ ರಿಮೋಟ್ ಕೋಡ್ ಎಕ್ಸಿಕ್ಯೂಷನ್‌ಗೆ ಸಂಪರ್ಕ ಕಲ್ಪಿಸುವಾಗ ತಾಂತ್ರಿಕ ತೊಡಕಾಗಿದ್ದು, ಇದರಿಂದ ಸುಲಭವಾಗಿ ಹ್ಯಾಕರ್‌ಗಳು ಈ ಉತ್ಪನ್ನಗಳನ್ನು ಹ್ಯಾಕ್ ಮಾಡಬಹುದಾಗಿದೆ. ಈ ಕಾರಣಕ್ಕೆ ಐಫೋನ್, ಮ್ಯಾಕ್‌ಬುಕ್ಸ್, ಐಪ್ಯಾಡ್ ಹಾಗೂ ವಿಷನ್ ಪ್ರೊ ಹೆಡ್‌ಸೆಟ್ ಬಳಸುವುದು ಅಪಾಯಕಾರಿ’ ಎಂದು ಸರ್ಟ್–ಇನ್ (ಭಾರತೀಯ ಕಂಪ್ಯೂಟರ್ ತುರ್ತು ಪ್ರತಿಕ್ರಿಯೆ ತಂಡ) ಎಚ್ಚರಿಕೆ ನೀಡಿದೆ. ಆ್ಯಪಲ್ ಸಫಾರಿ ವರ್ಷನ್‌ಗಳಾದ 17.4.1, ಆ್ಯಪಲ್ ಮ್ಯಾಕ್ ಒಎಸ್ ವೆಂಟುರಾ ವರ್ಷನ್‌ಗಳು, ಆ್ಯಪಲ್ ಮ್ಯಾಕ್ ಒಎಸ್ ಸೊನೊಮಾ ವರ್ಷನ್‌ಗಳು, ಐಪ್ಯಾಡ್ ಒಎಸ್ ವರ್ಷನ್‌ಗಳಲ್ಲಿ ಈ ಸಮಸ್ಯೆ ಎದುರಾಗಿದೆ ಎಂದು ಸರ್ಟ್–ಇನ್ ಹೇಳಿದೆ.

ರಿಮೋಟ್ ಕೋಡ್ ಎಕ್ಸಿಕ್ಯೂಷನ್‌ಗೆ ಕನೆಕ್ಷನ್ ಮಾಡುವಾಗ ತಾಂತ್ರಿಕ ತೊಡಕು ಎದುರಾಗಿದೆ. ಇದರಿಂದ ರಿಮೋಟ್ ಕೋಡ್ ಎಕ್ಸಿಕ್ಯೂಷನ್, ಮಾಹಿತಿ ಸೋರಿಕೆ, ಸುರಕ್ಷತೆ ವಿಚಾರದಲ್ಲಿ ಆ್ಯಪಲ್‌ನ ಕೆಲ ಉತ್ಪನ್ನಗಳಿಗೆ ಹಿನ್ನಡೆಯಾಗಿದೆ. ಇದರಿಂದಾಗಿ ಬಹುದೂರದಲ್ಲಿರುವ ಹ್ಯಾಕರ್‌ಗಳು ಐಫೋನ್, ಮ್ಯಾಕ್‌ಬುಕ್ಸ್, ಐಪ್ಯಾಡ್ಸ್ ಹಾಗೂ ವಿಷನ್ ಪ್ರೊ ಹೆಡ್‌ಸೆಟ್ ಹ್ಯಾಕ್ ಮಾಡುವ ಸಾಧ್ಯತೆ ಹೆಚ್ಚಿರುತ್ತದೆ. ವಿದೇಶದಲ್ಲೆಲ್ಲೋ ಕೂತು ಹ್ಯಾಕರ್‌ಗಳು ಆ್ಯಪಲ್ ಕಂಪನಿಯ ಈ ಉತ್ಪನ್ನಗಳನ್ನು ಹ್ಯಾಕ್ ಮಾಡಿ, ಹಣ ಎಗರಿಸುವ ಜತೆಗೆ ವೈಯಕ್ತಿಕ ಮಾಹಿತಿಯನ್ನೂ ಕದಿಯುವ ಸಾಧ್ಯತೆ ಇದೆ ಎಂಬುದು ಸರ್ಟ್–ಇನ್ ವಾದ.

### ಯಾವ ಉತ್ಪನ್ನಗಳಲ್ಲಿ ತೊಂದರೆ?

ಐಫೋನ್ ಎಕ್ಸ್‌ಎಸ್, ಐಪ್ಯಾಡ್ ಪ್ರೊ 12.19 ಇಂಚು, ಐಪ್ಯಾಡ್ ಪ್ರೊ 10.5 ಇಂಚು, ಐಪ್ಯಾಡ್ ಪ್ರೊ 11 ಇಂಚು, ಐಪ್ಯಾಡ್ ಏರ್, ಐಪ್ಯಾಡ್ ಹಾಗೂ ಐಪ್ಯಾಡ್ ಮಿನಿ ಬಳಸುವವರಿಗೆ ಹೆಚ್ಚು ಅಪಾಯವಿದೆ. ಐಫೋನ್ 8, ಐಫೋನ್ 8 ಪ್ಲಸ್, ಐಫೋನ್ ಎಕ್ಸ್, ಐಪ್ಯಾಡ್ 5ನೇ ಜನರೇಷನ್, ಐಪ್ಯಾಡ್ ಪ್ರೊ (9.7 ಇಂಚು) ಬಳಸುವವರಿಗೂ ಅಪಾಯವಿದೆ. ಹೀಗಾಗಿ, ಈ ಉತ್ಪನ್ನಗಳ ಬಳಕೆದಾರರು ಹೊಸ ಕಾರ್ಯಾಚರಣ ವ್ಯವಸ್ಥೆಯನ್ನು ಅಪ್‌ಡೇಟ್ ಮಾಡಿಕೊಳ್ಳಬೇಕು. ■

## ಒನ್‌ಪ್ಲಸ್‌ನಲ್ಲಿ ಈಗ ಮ್ಯಾಜಿಕ್ ಎರೇಸರ್!

ಒನ್‌ಪ್ಲಸ್ ಕಂಪನಿಯು ಎಐ ತಂತ್ರಜ್ಞಾನದ ಮೂಲಕ ರಚಿಸಿದ ‘ಮ್ಯಾಜಿಕ್ ಎರೇಸರ್’ ಫೀಚರ್ ಅನ್ನು ತನ್ನ ಹೊಸ ಸ್ಮಾರ್ಟ್‌ಫೋನ್‌ಗಳಲ್ಲಿ ಕಲ್ಪಿಸಲು ಮುಂದಾಗಿದೆ. ಇದು ಇಮೇಜ್ ಎಡಿಟಿಂಗ್‌ಗೆ ಸಹಕಾರಿಯಾಗುವುದರ ಜೊತೆಗೆ ಹಲವಾರು ರೀತಿಯ ಬಳಕೆಗೂ ನೆರವಾಗಲಿದೆ.

ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್ (LLM) ಮೂಲಕ ಕಾರ್ಯನಿರ್ವಹಿಸುವ ಇದು ಬಳಕೆದಾರರಿಗೆ ಎಐ ಚಾಲಿತ ಸಾಧನವನ್ನು ಒದಗಿಸುತ್ತದೆ, ಇದು ಚಿತ್ರಗಳಿಂದ ಅನಗತ್ಯ ವಸ್ತುಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಒನ್‌ಪ್ಲಸ್ ಈ ಫೀಚರ್ ಅನ್ನು ಸರಣಿ ಫೋನ್‌ಗಳಿಗೆ ಹಂತಹಂತವಾಗಿ ಅಳವಡಿಸಲಿದೆ. ಒನ್ ಪ್ಲಸ್ 12, 12ಆರ್, 11, ಓಪನ್ ಮತ್ತು ನಾರ್ಡ್ ಸಿಇ 4ನಲ್ಲಿ ಸದ್ಯ ಈ ಫೀಚರ್ ಲಭ್ಯ. ■